


# ಕಾಗಿನೆಲೆಯ ಪರಿಸರಸ್ನೇಹಿ ಥೀಮ್ ಪಾರ್ಕ್

**ಜಾತಿ ಪದ್ಧತಿಯ ತಾರತಮ್ಯಗಳನ್ನು ವಿರೋಧಿಸಿದವರಲ್ಲಿ ಕನಕದಾಸರು ಪ್ರಮುಖರು. ಅವರು ನಡೆದು ಬಂದ ಹಾದಿಯನ್ನು ಕಾಗಿನೆಲೆಯಲ್ಲಿ ಸುಂದರವಾಗಿ ಕಟ್ಟಿಕೊಡಲಾಗಿದೆ.**

**■ ಆರ್.ಬಿ. ಗುರುಬಸವರಾಜ**

ಆಪ್ತರೊಂದಿಗೆ ಕಾಗಿನೆಲೆಗೆ ಹೋಗುವ ಸದವಕಾಶವನ್ನು ಕಳೆದುಕೊಳ್ಳಲಿಲ್ಲ. ಬಹುವರ್ಷಗಳ ಹಿಂದೆ ನೋಡಿದ್ದ ಕನಕದಾಸರ ನೆಲೆಯನ್ನು ಮತ್ತೊಮ್ಮೆ ನೋಡುವ ತವಕದಿಂದ ಇದ್ದ ಎಲ್ಲಾ ಕೆಲಸವನ್ನು ಬದಿಗೊತ್ತಿ ಅವರ ಜೊತೆಗೆ ಹೊರಟೆ. ವೈಯಕ್ತಿಕ ಕೆಲಸ ಮುಗಿಸಿಕೊಂಡ ನಂತರ ಕನಕದಾಸರ ಆದಿಕೇಶವ ದೇವಾಲಯ ನೋಡಿಕೊಂಡು ಬಂದೆವು.

ನಂತರ ಅಲ್ಲಿನ ಸ್ಥಳೀಕರು ಪಾರ್ಕ್‌ಗೆ ಹೋಗಿ  ಬನ್ನಿ ಎಂದು ಸಲಹೆ ನೀಡಿದರು. ಅಲ್ಲೇನಿದೆ? ಎಂದು ಕೇಳಿದೆವು. ಒಮ್ಮೆ ಹೋಗಿ ಬನ್ನಿ, ಖಂಡಿತ ನಿಮಗೆ ಖುಷಿಯಾಗುತ್ತೆ ಎಂದರು. ನಮ್ಮ ವಾಹನ ಅತ್ತ ತಿರುಗಿತು. ಕಾಗಿನೆಲೆಯಿಂದ ಸುಮಾರು ಎರಡು ಕಿ.ಮೀ. ದೂರದಲ್ಲಿ ಕನಕ ಅಭಿವೃದ್ಧಿ ಪ್ರಾಧಿಕಾರದಿಂದ ನಿರ್ಮಾಣವಾದ ಥೀಮ್ ಪಾರ್ಕ್‌ನ ಭವ್ಯವಾದ ಪ್ರವೇಶದ್ವಾರ ಪ್ರವಾಸಿಗರಿಗೆ ಸ್ವಾಗತಿಸುತ್ತದೆ.

ಬಾಗಿಲ ಬಳಿಯ ಟಿಕೆಟ್ ಕೌಂಟರ್‌ನಲ್ಲಿ ಟಿಕೆಟ್ ತೆಗೆದುಕೊಳ್ಳಬೇಕು. ವಿಶಾಲವೂ, ಸುಂದರವೂ ಹಾಗೂ ಹಚ್ಚಹಸಿರಿನಿಂದ ಕಂಗೊಳಿಸುವ ಪಾರ್ಕ್ ಅನ್ನು ನೋಡಿದಾಕ್ಷಣ 'ವಾವ್' ಎಂಬ ಉದ್ಗಾರ ಹೊರಬಿತ್ತು. ನಾವು ಪಾರ್ಕ್ ಒಳಗೆ ಕಾಲಿಡುತ್ತಿದ್ದಂತೆ ಒಂದು ಸಣ್ಣ ಜಿಂಕೆಗಳ ಹಿಂಡು ನಮ್ಮತ್ತ ತಿರುಗಿ ಸ್ವಾಗತಿಸಿದವು. ತುಂಬಾ ಮುದ್ದಾದ ಜಿಂಕೆಗಳು. ಅವುಗಳ ಬಳಿ ಹೋಗಲು ಆಗಲಿಲ್ಲ. ಸುತ್ತ ಬೇಲಿ ಹಾಕಿದ್ದರು. ಆದರೂ ಅವು ತುಂಬಾ ಹೊತ್ತಿನಿಂದ ಕತ್ತು ಹೊರಳಿಸದೇ ನಮ್ಮನ್ನು ನೋಡುತ್ತಲೇ ಇದ್ದವು. ನಂತರವೇ



